ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

E-Mail: prydirector.edu.sgkar@nic.in

ಸಂಖ್ಯೆ: ಆರ್.ಟಿ.ಇ./ಶು.ಮ.ಪಾ/2017-18 [280386]

ದಿನಾಂಕ : 16ನೇ ಫೆಬ್ರವರಿ 2019

## -: ಸುತ್ತೋಲೆ :-

ವಿಷಯ: 2016-17ನೇ ಸಾಲಿನ ಅಪೀಲು ತಂತ್ರಾಂಶ ಹಾಗೂ ಶುಲ್ಕ ಮರುಪಾವತಿ ತಂತ್ರಾಂಶದ ಗಡುವನ್ನು ಮುಕ್ತಾಯಗೊಳಿಸುವ ಕುರಿತು.

\- - -

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2016-17ನೇ ಸಾಲಿನ ಶುಲ್ಕ ಮರುಪಾವತಿ ಮತ್ತು ಅಪೀಲು ತಂತ್ರಾಂಶವನ್ನು ಮುಕ್ತಾಯಗೊಳಿಸುವ ಕುರಿತಂತೆ ಈ ಕೆಳಕಂಡ ಅಂಶಗಳ ಬಗ್ಗೆ ನಿಮ್ಮ ಗಮನ ಸೆಳೆಯಲಾಗಿದೆ.

- 2016-17ರ ತಂತ್ರಾಂಶವನ್ನು ಮೂರು ವರ್ಷಗಳ ಹಿಂದೆ ಆನ್‌ಲೈನ್ ಪ್ರಕ್ರಿಯೆಗೆ ಒಳಪಡಿಸಿದ್ದು, ಸದರಿ ತಂತ್ರಾಂಶದಲ್ಲಿ 11493 ಶಾಲೆಗಳ ಪೈಕಿ 10750 ಶಾಲೆಗಳಿಗೆ ಮರು ಶುಲ್ಕ ಪಾವತಿಯನ್ನು ಈಗಾಗಲೇ ಮಾಡಲಾಗಿದೆ.
- 2016-17ನೇ ಸಾಲಿನ ಶುಲ್ಕ ಮರುಪಾವತಿಯನ್ನು ಸ್ವೀಕರಿಸಿದ ಕೆಲವು ಶಾಲೆಗಳ ಮರುಪಾವತಿಯ ಶುಲ್ಕದ ಮೊತ್ತದ ದರವು ಸರಿ ಇಲ್ಲವೆಂದು ವರದಿ ಸಲ್ಲಿಸಿದಾಗ, ಇದಕ್ಕೆ ಪರಿಹಾರವಾಗಿ ಅಪೀಲು ತಂತ್ರಾಂಶವನ್ನು ಸಿದ್ಧಪಡಿಸಿ ಆನ್‌ಲೈನ್ ಮುಖೇನ ಸಂಬಂಧಪಟ್ಟ ಫಲಾನುಭವಿ ಶಾಲೆಗಳಿಗೆ ಅಪೀಲು ಹೋಗಲು ಅನುವು ಮಾಡಿಕೊಡಲಾಗಿದೆ.
- 2016-17 ಶುಲ್ಕ ಮರುಪಾವತಿ ಹಾಗೂ ಅಪೀಲು ತಂತ್ರಾಂಶವನ್ನು 2017-18 ಮತ್ತು 2018-19ನೇ ಸಾಲಿನಲ್ಲಿಯೂ ಕೂಡ ಬಿಡುಗಡೆ ಮಾಡಿದ್ದು ಸದರಿ ಅಪೀಲು ತಂತ್ರಾಂಶದ ಮುಖೇನ 188 ಶಾಲೆಗಳು ಅಪೀಲು ವ್ಯತ್ಯಾಸದ ಮೊತ್ತವನ್ನು ಈಗಾಗಲೇ ಪಡೆದು 2018-19ನೇ ಸಾಲಿನ ಆರ್.ಟಿ.ಇ. ಶುಲ್ಕಮರುಪಾವತಿಗಾಗಿ ಬೇಡಿಕೆಗಳನ್ನು ಸಲ್ಲಿಸಿರುತ್ತಾರೆ.
- ಈ ಶಾಲೆಗಳ ಪೈಕಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ 14 ಶಾಲೆಗಳು ಮತ್ತು ಜಿಲ್ಲಾ ಉಪನಿರ್ದೇಶಕರು [ಆಡಳಿತ] ಇವರ ಹಂತದಲ್ಲಿ 56 ಶಾಲೆಗಳು ಶುಲ್ಕ ಮರುಪಾವತಿ ಅಪೀಲು ಬೇಡಿಕೆಗಳನ್ನು ಈ ದಿನದವರೆಗೂ ಇತ್ಯರ್ಥಪಡಿಸಿರುವುದಿಲ್ಲ.
- ಸಂಬಂಧಿಸಿದ ಶಾಲೆಗಳ ಶುಲ್ಕ ಮರುಪಾವತಿಯನ್ನಾಗಲೀ ಅಥವಾ ಅಪೀಲು ಮೊತ್ತಕ್ಕಾಗಲೀ ಸಮಸ್ಯೆಗಳನ್ನು ಉಪನಿರ್ದೇಶಕರು [ಆಡಳಿತ] ಅಥವಾ ಕ್ಷೇತ್ರಶಿಕ್ಷಣಾಧಿಕಾರಿಗಳು ಅಂತಹ ಪ್ರಕರಣಗಳನ್ನು ದಿನಾಂಕ: 23.02.2019ರೊಳಗಾಗಿ ಇತ್ಯರ್ಥಪಡಿಸಿಕೊಳ್ಳದಿದ್ದಲ್ಲಿ, ಸದರಿ ತಂತ್ರಾಂಶಗಳನ್ನು ಸ್ಥಗಿತಗೊಳಿಸಿ ಸಂಬಂಧಪಟ್ಟ ಶಾಲೆಗಳನ್ನು ಆರ್.ಟಿ.ಇ. ಶುಲ್ಕ ಮರುಪಾವತಿ ಪಟ್ಟಿಯಿಂದ ಕೈಬಿಡಲಾಗುವುದು ಹಾಗೂ ಶಾಲೆಗಳಿಗೆ ಸದರಿ ಮಾಹಿತಿಯನ್ನ ನೀಡದೇ ಅರ್ಹತೆ ಉಳ್ಳ ಆರ್.ಟಿ.ಇ. ಶಾಲೆಗಳನ್ನು ತಂತ್ರಾಂಶದಿಂದ ಕೈಬಿಟ್ಟುಹೋದ ಪ್ರಕರಣಗಳಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು [ಆಡಳಿತ] ರವರನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.

(ಡಾ॥ ಪಿ.ಸಿ.ಜಾಫರ್) ಭಾ.ಆ.ಸೇ.,
ಆಯುಕ್ತರು, 16/2

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳಿಗೆ ತುರ್ತು ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಇವರಿಗೆ ತುರ್ತು ಕ್ರಮಕ್ಕಾಗಿ
3. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು
4. ಹಿರಿಯ ಸಹಾಯಕ ನಿರ್ದೇಶಕರು, ಎಸ್.ಎ.ಟಿ.ಎಸ್. ಎಸ್.ಎಸ್.ಎ. ಬೆಂಗಳೂರು
5. ಕಂಪ್ಯೂಟರ್ ಪ್ರೋಗ್ರಾಮರ್ಸ್ ಶ್ರೀ ಶಿವಕುಮಾರ್ ಮತ್ತು ಶ್ರೀ ನಾಗೇಶ್ ಇವರುಗಳ ಮಾಹಿತಿಗಾಗಿ
6. ಕಛೇರಿ ಪ್ರತಿ.